# ಕೋಟೇಶ್ವರ ಸಹಕಾರಿ ಬ್ಯಾಂಕ್ ನಿಯಮಿತ

12/2,'ವಿಶ್ವೋತ್ತಮ',ಒಂದನೇಮಹಡಿ,2ನೇಮುಖ್ಯರಸ್ತೆ,ಶೇಷಾದ್ರಿಪುರಂ,ಬೆಂಗಳೂರು–560020. ದೂ.:23561144/45

## ಇಪ್ಪತ್ತಾರನೆಯ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಮಾನ್ಯರೇ,

ಬ್ಯಾಂಕಿನ **2023–24ನೇ** ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು **ದಿನಾಂಕ 01–09–2024 ಭಾನುವಾರ** ಬೆಳಗ್ಗೆ 11–00 ಘಂಟೆಗೆ **"ಶ್ರೀ ರಾಯರಾಯ ಕಲ್ಯಾಣ ಮಂಟಪ"**, ದೊಡ್ಡಭತ್ರ, ನಂ. 88, ಪಂಪಮಹಾಕವಿ ರಸ್ತೆ, ಬೆಂಗಳೂರು–560 004 ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ

**ಶ್ರೀ ಟಿ. ರಾಘವೇಂದ್ರ ಹತ್ವಾರ್ ರವರ**

ಅಧ್ಯಕ್ಷತೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಲು ಕರೆಯಲಾಗಿದೆ. ಮಾನ್ಯ ಸದಸ್ಯರೆಲ್ಲರೂ ತಪ್ಪದೇ ಸಕಾಲಕ್ಕೆ ಸಭೆಗೆ ದಯಮಾಡಿಸಿ, ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಕೋರಲಾಗಿದೆ. ಸಾಮಾನ್ಯಸಭೆಯನ್ನು ಪ್ರಾರಂಭಿಸುವ ಸಮಯದಲ್ಲಿ ಸಭಾವಶ್ಯಕ ಸಂಖ್ಯೆ (ಕೋರಂ) ಇಲ್ಲದಿದ್ದಲ್ಲಿ, ಸಾಮಾನ್ಯ ಸಭೆಯನ್ನು ಅದೇ ದಿನ ಮಧ್ಯಾಹ್ನ 1:00 ಗಂಟೆಗೆ ಮುಂದೂಡಲ್ಪಟ್ಟು ಕೆಳಕಂಡ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಲ್ಪಡುತ್ತದೆ. ಮುಂದುವರೆದ ಸಭೆಗೂ ಸಹ ಕಲಾಪವನ್ನು ನಡೆಸಲು ಕೋರಂ ಅಗತ್ಯವಿರತಕ್ಕದ್ದು. ಸಭಾವಶ್ಯಕ ಸಂಖ್ಯೆ ಆಗದಿದ್ದಲ್ಲಿ ಸಮಾನ್ಯ ಸಭೆಯನ್ನು ರದ್ದುಗೊಳಿಸಲಾಗುವುದು ಅಥವಾ ಮುಂದೂಡಲ್ಪಡುವುದು.

## ಕಾರ್ಯಕ್ರಮ

1. ದೇವತಾ ಪ್ರಾರ್ಥನೆ.
2. ಸ್ವಾಗತ.
3. 26ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.
4. ಮೃತ ಸದಸ್ಯರ ಬಗ್ಗೆ ಸಂತಾಪ ಸೂಚನೆ.
5. ದಿನಾಂಕ 20–08–2023ರಂದು ನಡೆದ ಇಪ್ಪತ್ತೈದನೆಯ ಸರ್ವಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು.
6. 2023–24ನೇ ಸಾಲಿನ ಆಡಳಿತ ವರದಿಯನ್ನು ಓದಿ ದಾಖಲಿಸುವುದು.
7. 2023–24ನೇ ಸಾಲಿನ ಲೆಕ್ಕ ಪರಿಶೋಧಿತವಾಗಿರುವ ಲೆಕ್ಕಪತ್ರಗಳನ್ನು ಪರಿಶೀಲಿಸಿ ಅಂಗೀಕರಿಸುವುದು.
8. 2023–24ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು.
9. 2023–24ನೇ ಸಾಲಿನಲ್ಲಿ ಆಗಿರುವ ಹೆಚ್ಚುವರಿ ಖರ್ಚನ್ನು ಅನುಮೋದಿಸುವುದು ಮತ್ತು 2024–25ನೇ ಸಾಲಿನ ಅಂದಾಜು ಆಯವ್ಯಯವನ್ನು ಮಂಜೂರು ಮಾಡುವುದು.
10. ಬೈಲಾ ತಿದ್ದುಪಡಿ.
11. 2024–25ನೇ ಸಾಲಿನ ಶಾಸನ ಬದ್ಧ ಲೆಕ್ಕಪರಿಶೋಧಕರನ್ನು ಅನುಮೋದಿಸುವ ಬಗ್ಗೆ.
12. ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳು (ಸಭೆಗೆ 5 ದಿವಸ ಮುಂಚಿತವಾಗಿ ತಲುಪಿದವುಗಳು ಮಾತ್ರ).
13. ಅಧ್ಯಕ್ಷರ ಭಾಷಣ.
14. ವಂದನಾರ್ಪಣೆ.

ಆ.ಮಂ. ಅಪ್ಪಣೆ ಮೇರೆಗೆ
ಸಹಿ/–
**ಚಂದ್ರಿಕಾ ಎಂ.**
ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : 28–06–2024

**ಸೂಚನೆ : ಗುರುತಿನ ಚೀಟಿ ಕಡ್ಡಾಯವಾಗಿ ತರತಕ್ಕದ್ದು.**
**ವಾರ್ಷಿಕ ಮಹಾಸಭೆಯ ವಿಶೇಷ ಸವಲತ್ತುಗಳು ಬೆಳಗ್ಗೆ 12 ಗಂಟೆವರೆಗೆ ಮಾತ್ರ.**
**ಪ್ರತಿಭಾ ಪುರಸ್ಕಾರ : ಬೆಳಗ್ಗೆ 10 ಘಂಟೆಗೆ**
ಐದು ಲಕ್ಷ ಠೇವಣಿವರೆಗೆ ವಿಮಾ ಭದ್ರತೆ ದೊರೆಯುತ್ತದೆ.
**ನಮ್ಮ ಬ್ಯಾಂಕಿನ ಸದಸ್ಯರು ATM / Debit Card & Locker ಸೇವೆಯನ್ನು ಉಪಯೋಗಿಸಿಕೊಳ್ಳಬೇಕಾಗಿ ವಿನಂತಿ.**

# ವಿಶೇಷ ಸೂಚನೆಗಳು

1. ಸರ್ವ ಸದಸ್ಯರ ಸಭಾ ಪ್ರವೇಶಕ್ಕೆ ಗುರುತಿನ ಚೀಟಿ ಕಡ್ಡಾಯ.
2. ಬ್ಯಾಂಕಿನ 'ಗುರುತಿನ ಚೀಟಿ' ಪಡೆಯದೆ ಇರುವ ಸದಸ್ಯರು ತಮ್ಮ 2 ಭಾವಚಿತ್ರಗಳನ್ನು ಕಛೇರಿಯಲ್ಲಿ ನೀಡಿ ಗುರುತಿನ ಚೀಟಿಯನ್ನು ಪಡೆಯಬೇಕು.
3. ದಿನಾಂಕ 16–08–2024 ರಂದು ಬ್ಯಾಂಕಿನಲ್ಲಿ ಪ್ರಕಟಿಸುವ ಸುಸ್ತಿದಾರ ಸದಸ್ಯರು ಸರ್ವಸದಸ್ಯರ ಸಭೆಯಲ್ಲಿ ಮತದಾನದ ಹಕ್ಕನ್ನು ಕಳೆದುಕೊಂಡಿರುತ್ತಾರೆ.
4. ಬ್ಯಾಂಕಿನ 2023–2024 ಲೆಕ್ಕಪರಿಶೋಧನಾ ವರದಿ ಹಾಗು ಆರ್.ಬಿ.ಐ. ಇನ್‌ಸ್ಪೆಕ್ಷನ್ ವರದಿ ಮತ್ತು ಇವುಗಳಿಗೆ ಸಂಬಂಧಪಟ್ಟ ಅನುಪಾಲನ ವರದಿಗಳು ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ಲಭ್ಯವಿದೆ. ನೋಡಲು ಇಚ್ಛಿಸುವ ಸದಸ್ಯರು ಮುಂಚಿತವಾಗಿ ಲಿಖಿತ ಮೂಲಕ ತಿಳಿಸಿ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ಈ ವರದಿಗಳನ್ನು ನೋಡಬಹುದು.
5. ಬ್ಯಾಂಕಿನ 2023–2024ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಮುದ್ರಿತ ವರದಿ ಪುಸ್ತಕವನ್ನು ದಿನಾಂಕ 20–08–2024 ರಿಂದ ಬ್ಯಾಂಕಿನ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಸಭೆಗೆ ವರದಿ ಪುಸ್ತಕವನ್ನು ತಪ್ಪದೆ ತರತಕ್ಕದ್ದು ಹಾಗೂ ಹಾಜರಿ ಪುಸ್ತಕದಲ್ಲಿ ಸಹಿ ಮಾಡಬೇಕಾಗಿ ಕೋರಲಾಗಿದೆ.
6. ಆಡಿಟ್ ಆದ ಲೆಕ್ಕ ಪತ್ರಗಳ ವಿಷಯದಲ್ಲಿ ವಿವರ ಬಯಸುವವರು ದಿನಾಂಕ 26–08–2024 ಕ್ಕೆ ಮುಂಚಿತವಾಗಿ ಲಿಖಿತ ಮೂಲಕ ತಿಳಿಸಬೇಕಾಗಿ ವಿನಂತಿ.
7. ಷೇರು ಪ್ರಮಾಣಪತ್ರವನ್ನು ಪಡೆಯದಿರುವ ಸದಸ್ಯರು ಬ್ಯಾಂಕಿನ ಕೆಲಸದ ವೇಳೆಯಲ್ಲಿ ತಪ್ಪದೇ ಪಡೆಯಬೇಕಾಗಿ ವಿನಂತಿ.
8. ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದ್ದು ಅದಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ. ಸದಸ್ಯರ ಮಕ್ಕಳು 10ನೇ ತರಗತಿ ಮತ್ತು 2ನೇ ಪಿ.ಯು.ಸಿ.ಯಲ್ಲಿ 90%ಗಿಂತ ಜಾಸ್ತಿ ಕ್ರಮಾಂಕ ತೆಗೆದಿರುವವರು ಅರ್ಜಿಯನ್ನು ದಿನಾಂಕ : 09–08–2024 ರೊಳಗೆ ಬ್ಯಾಂಕಿನ ಕಛೇರಿಯಲ್ಲಿ ಸಲ್ಲಿಸಬೇಕಾಗಿ ವಿನಂತಿ. ಅರ್ಜಿ ಫಾರಂನ್ನು ಬ್ಯಾಂಕಿನಲ್ಲಿ ಪಡೆಯಬಹುದು. ಪುರಸ್ಕೃತ ಮಕ್ಕಳು ಕಡ್ಡಾಯವಾಗಿ ಹಾಜರಾಗತಕ್ಕದ್ದು. ಪುರಸ್ಕೃತ ಮಕ್ಕಳು ಹೆಸರು ನೋಂದಾಯಿಸಲು 9.00 ಗಂಟೆಗೆ ಹಾಜರಿರತಕ್ಕದ್ದು.
9. ಮರಣೋತ್ತರ ನಿಧಿ ಹಣವನ್ನು ಬ್ಯಾಂಕಿನಿಂದ ಪಡೆಯಲು, ನಾಮಿನೇಷನ್ ಮಾಡಬೇಕಾಗಿ ಕೋರಿಕೆ. ಮರಣೋತ್ತರ ನಿಧಿಗಾಗಿ ನಾಮಿನೇಷನ್ ಅರ್ಜಿಯನ್ನು ಬ್ಯಾಂಕಿಗೆ ಸಲ್ಲಿಸದಿದ್ದಲ್ಲಿ ಈ ಸೌಲಭ್ಯ ದೊರೆಯುವುದಿಲ್ಲ. ನಾಮಿನೇಷನ್ ಅರ್ಜಿ ಫಾರಂನ್ನು ಬ್ಯಾಂಕಿನಿಂದ ಪಡೆಯಬಹುದು.
10. ಪ್ರತಿಭಾ ಪುರಸ್ಕಾರದ ಬಗ್ಗೆ ದೇಣಿಗೆ ಕೊಡಲಿಚ್ಛಿಸುವವರು ಬ್ಯಾಂಕಿನ ಅಧಿಕಾರಿಗಳನ್ನು ದಿನಾಂಕ 28–08–2024 ರ ಒಳಗೆ ಸಂಪರ್ಕಿಸಬಹುದು.
11. 2020–21ನೇ ಸಾಲಿನ ಡಿವಿಡೆಂಡನ್ನು ಪಡೆಯದಿರುವ ಸದಸ್ಯರುಗಳು ದಿನಾಂಕ 31-12-2024 ರೊಳಗೆ ಬ್ಯಾಂಕಿನ ಕೆಲಸದ ವೇಳೆಯಲ್ಲಿ ಬಂದು ಪಡೆಯತಕ್ಕದ್ದು. ಇಲ್ಲದಿದ್ದಲ್ಲಿ ಬ್ಯಾಂಕಿನ ಬೈಲಾ 122ರ ಪ್ರಕಾರ ಡಿವಿಡೆಂಡ್ ಹಣವನ್ನು ಆಪದ್ಧನ ನಿಧಿಗೆ ವರ್ಗಾಯಿಸಲಾಗುವುದು.
12. ಬ್ಯಾಂಕಿನಲ್ಲಿ ಖಾತೆ ಹೊಂದಿರುವ ಎಲ್ಲಾ ಗ್ರಾಹಕರು ಬ್ಯಾಂಕಿಗೆ ಬಂದು ತಮ್ಮ ಇತ್ತೀಚಿನ ಭಾವಚಿತ್ರದೊಂದಿಗೆ ಆಧಾರ್ ಕಾರ್ಡ್, ಮತದಾನದ ಗುರುತಿನ ಚೀಟಿ ಅಥವಾ ಇತರೆ ಅಧಿಕೃತ ದಾಖಲಾತಿಗಳನ್ನು ನೀಡಬೇಕಾಗಿ ವಿನಂತಿ ಹಾಗೂ ಖಾತೆ ಹೊಂದಿರದ ಸದಸ್ಯರು, ತಮ್ಮ ಹತ್ತಿರದ ಶಾಖೆಗೆ ಬಂದು, ಖಾತೆ ತೆರೆದು, ನಮ್ಮ ಬ್ಯಾಂಕಿನೊಂದಿಗೆ ವ್ಯವಹರಿಸಬೇಕಾಗಿ ವಿನಂತಿ.

ದುರ್ಗಾಂಬಿಕಾ ಪ್ರಿಂಟರ್ಸ್, ಮಲ್ಲೇಶ್ವರಂ, ಬೆಂಗಳೂರು – 560003, ದೂರವಾಣಿ : 9844412729

**ತೆರೆದ ಅಂಚೆ**

ಇವರಿಗೆ,

ಶ್ರೀಮತಿ / ಶ್ರೀ..........................................................................

..................................................................................

..................................................................................

..................................................................................

ತಲುಪಿಸಲಾಗದಿದ್ದಲ್ಲಿ ಕೆಳಕಂಡಲ್ಲಿಗೆ ಹಿಂದಿರುಗಿಸುವುದು
**ಕೋಟೇಶ್ವರ ಸಹಕಾರಿ ಬ್ಯಾಂಕ್ ನಿಯಮಿತ**
12/2, 'ವಿಶ್ವೋತ್ತಮ', ಒಂದನೇ ಮಹಡಿ, 2ನೇ ಮುಖ್ಯರಸ್ತೆ,
ಶೇಷಾದ್ರಿಪುರಂ, ಬೆಂಗಳೂರು–560 020. ದೂ.: 23561145